
# ಸತ್ಯಕ್ಕೇ ಗೆಲುವು



**■ ಕೆ. ಆದಿತ್ಯ ಹೆಬ್ಬಾರ್, ಹರಪನಹಳ್ಳಿ**
ಕಲೆ: ಸಂತೋಷ್ ಸಸಿಹಿತ್ಲು

ಗಿರಿಜಮ್ಮ ಕುಟುಂಬ ಸಮೇತ ವಾರದ ಮಟ್ಟಿಗೆ ದಕ್ಷಿಣ ಭಾರತ ಯಾತ್ರೆಗೆಂದು ಹೊರಟಿದ್ದರು. ಮನೆಯಲ್ಲಿದ್ದ ಕೆಲವೇ ಆಭರಣಗಳನ್ನು ಧರಿಸಿಕೊಂಡೇ ಹೋದರೂ ಇದ್ದ ಏಕೈಕ ಕಾಸಿನ ಸರವನ್ನೇನು ಮಾಡುವುದು? ಧರಿಸಿಕೊಂಡು ಹೋಗಲು ಭಯ! ಮನೆಯಲ್ಲಿಯೇ ಇಟ್ಟು ಹೋದರೆ ಬೀಗ ಹಾಕಿದ ಮನೆ, ಕಳ್ಳರು ದೋಚಿದರೆ? ಆಗ ಅವರಿಗೆ ನೆನಪಾದುದು ಪಕ್ಕದ ಮನೆಯ ಆಪ್ತ ಗೆಳತಿ ಸರೋಜಾ. ಇಬ್ಬರೂ ಜೀವಕ್ಕೆ ಜೀವ ಕೊಡುವ ಮಟ್ಟಿನ ಗೆಳತಿಯರು. ಸರಿ, ಸರೋಜಳ ಕೈಗೆ ಸರವನ್ನೊಪ್ಪಿಸಿ ವಾರದ ನಂತರ ಹಿಂತಿರುಗಿದ ಮೇಲೆ ಪಡೆಯುವುದಾಗಿ ಹೇಳಿ ನಿಶ್ಚಿಂತೆಯಿಂದ ಬಸ್ ಹತ್ತಿದರು.

ವಾರ ಕಳೆಯಿತು. ಮರಳಿ ಮನೆ ತಲುಪಿದ ಸ್ವಲ್ಪ ಹೊತ್ತಿನ ನಂತರ ಗಿರಿಜಮ್ಮ ಸರೋಜಳಿಗೆ ದೇಗುಲಗಳ ಪ್ರಸಾದ, ಕುಂಕುಮ ಕೊಟ್ಟು ತನ್ನ ಕಾಸಿನಸರ ವಾಪಸ್ ಕೊಡಲು ವಿನಂತಿಸಿದಳು. ಕೂಡಲೇ ಸರೋಜ ಕಣ್ಣಗಲಿಸಿ 'ಅರೆ! ಯಾವ ಕಾಸಿನಸರ? ನನ್ನ ಬಳಿ ಯಾವಾಗ ಕೊಟ್ಟೀರಿ?' ಎಂದಳು. ಗಿರಿಜಮ್ಮನಿಗೆ ಜಂಘಾಬಲವೇ ಉಡುಗಿತ್ತು. 'ಸರೋಜಮ್ಮ, ತಮಾಷೆ ಮಾಡಬೇಡಿ. ನನ್ನ ಕಾಸಿನಸರ ನಿಮ್ಮ ಬಳಿ ಇಟ್ಟುಕೊಂಡಿರಲು ಕೊಟ್ಟಿದ್ದು, ದಯವಿಟ್ಟು ಕೊಟ್ಟುಬಿಡಿ'. ಸರೋಜಮ್ಮ ಕೋಪದಿಂದ ದೂಷಿಸತೊಡಗಿದಳು. ಮಾತಿಗೆ ಮಾತು ಬೆಳೆಯಿತು. ಜನ ಸೇರಿತು. ಕೊನೆಗೆ ವಿವಾದ ಕೋರ್ಟ್ ಮೆಟ್ಟಿಲೇರಿತು. ವಕೀಲರ ವಾದ, ಪ್ರತಿವಾದ ಎಲ್ಲವೂ ಮುಗಿದ ನಂತರ ನ್ಯಾಯಾಧೀಶರು ಇಬ್ಬರನ್ನೂ ಉದ್ದೇಶಿಸಿ ಹೇಳಿದರು. 'ಇಬ್ಬರೂ ನಿಮ್ಮ ನಿಮ್ಮ ಹೇಳಿಕೆಗೆ ಬದ್ಧರಾಗಿದ್ದೀರಿ. ಗಿರಿಜಮ್ಮ, ನೀವು ಕಾಸಿನಸರ ಅವರ ಕೈಯಲ್ಲಿ ಕೊಡುವಾಗ ಸಾಕ್ಷಿಯಾಗಿ ಅಲ್ಲಿ ಯಾರಾದರೂ ಇದ್ದರೆ?' ಗಿರಿಜಮ್ಮ ಕೂಡಲೇ 'ಹೌದು ಸ್ವಾಮಿ. ಇವರ ದೂರದ ಸಂಬಂಧಿ ಲಲಿತ ಅಂತ. ಇದೇ ಊರಿನವರು. ಅವರ ಎದುರೇ ನಾನು ಇವರಿಗೆ ಸರ ಕೊಟ್ಟಿದ್ದು' ಎಂದರು. 'ಸುಳ್ಳು ಮಹಾಸ್ವಾಮಿ, ನನಗೆ ಲಲಿತ ಅನ್ನುವ ಹೆಸರಿನ ಯಾವ ಸಂಬಂಧಿಯೂ ಇಲ್ಲ' ಸರೋಜಮ್ಮ ಕಡ್ಡಿ ತುಂಡು ಮಾಡಿದಂತೆ ನುಡಿದಳು.

ನ್ಯಾಯಾಧೀಶರು ಯೋಚಿಸಿ ಹೇಳಿದರು 'ಗಿರಿಜಮ್ಮ, ನೀವು ಲಲಿತ ಅನ್ನೋರನ್ನ ಕರೆದುಕೊಂಡು ಬಂದು ನಮ್ಮ ಎದುರು ನಿಲ್ಲಿಸುತ್ತೀರಾ?' ಎಂದರು. ಆಗಲಿ ಎಂದು ಹೊರಟರು. ಗಿರಿಜಮ್ಮ ಎಷ್ಟು ಹೊತ್ತಾದರೂ ಬರಲಿಲ್ಲ. ಎಲ್ಲರೂ ಬಾಗಿಲನ್ನೇ ನೋಡುತ್ತಿದ್ದರು. ನ್ಯಾಯಾಧೀಶರು ಸರೋಜಮ್ಮನನ್ನು ಉದ್ದೇಶಿಸಿ 'ಏನಮ್ಮಾ, ಇನ್ನೂ ಬರಲಿಲ್ಲ?' ಅನ್ನುವಷ್ಟರಲ್ಲಿ 'ಲಲಿತ ಊರಲ್ಲಿಲ್ಲ ಸ್ವಾಮಿ. ಮೊನ್ನೆ ತಾನೇ ಗುಜರಾತಿನ ಮಗಳ ಮನೆಗೆ ಹೋಗಿದ್ದಾಳೆ' ಎಂದುಬಿಟ್ಟರು.

'ಹಾಗಾದರೆ ನಿನಗೆ ಲಲಿತ ಗೊತ್ತು ಅಂತಾಯಿತು. ಸರ ತೆಗೆದುಕೊಂಡಿದ್ದು ನಿಜ ತಾನೇ? ಯಾಕೆ ಸುಳ್ಳು ಹೇಳಿದೆ?' ಎಂದು ದಬಾಯಿಸಿದಾಗ ಸರೋಜಮ್ಮ ಮಾತು ಬಾರದೇ ತಲೆ ತಗ್ಗಿಸಿ ನಿಂತಳು. ತಪ್ಪು ಒಪ್ಪಿಕೊಂಡು ಕಾಸಿನಸರ ಹಿಂದಿರುಗಿಸಿದಳು. ■